sdmimd

## Kannada Prabha

Date: 03-12-2019 Page No: 4

Edition: Mysore Language: Kannada

# 6ರಿಂದ ಮಾನವ ಸಂಪನ್ಮೂಲ ಅಂತಾರಾಷ್ಟ್ರೀಯ ಸಮ್ಮೇಳನ

**ಮೈಸೂರು:** ನಗರದ ಎಸ್‌ಡಿಎಂಐಎಂಡಿ ಸಂಸ್ಥೆಯಲ್ಲಿ ಕಾರ್ಯಕ್ಷೇತ್ರದಲ್ಲಿ ಮಾನವ ಸಂಪನ್ಮೂಲ ನಿರ್ವಹಣೆ ವಿಷಯ ಕುರಿತು ಡಿ. 6 ಮತ್ತು 7ರಂದು ಅಂತಾರಾಷ್ಟ್ರೀಯ ಸಮ್ಮೇಳನವನ್ನು ಆಯೋಜಿಸಿದೆ. ಜರ್ಮನಿಯ ಹೀಲ್ಬ್ರೋನ್ ವಿವಿಯ ಪ್ರಾಧ್ಯಾಪಕರಾದ ಡಾ. ಸುಸಾನ್ ವಿಲ್ವರ್ಸ್ ಅವರು ಸಮ್ಮೇಳನ ಉದ್ಘಾಟಿಸುವರು. ಬ್ರಿಟಿಷ್ ಯುನಿವರ್ಸಿಟಿ ಇನ್ ದುಬೈನ ಸಂಶೋಧನಾ ವಿಭಾಗದ ಡೀನ್ ಡಾ. ಆಶ್ಲೆ ಪಿನ್ನಿಂಗ್ಟನ್, ಬೆಂಗಳೂರಿನ ಜೆಸಿಇಒ, ಜಿಐ ಟ್ಯಾಗ್ಡ್ ಎಸ್. ತಜಸ್ ಅವರು ಕಾರ್ಯಕ್ಷೇತ್ರದಲ್ಲಿ ಮಹಿಳಾ ಕಾರ್ಯನಿರ್ವಾಹಕರಿಗೆ ಇರುವ ಸಮಸ್ಯೆಗಳು ಮತ್ತು ಸವಾಲುಗಳು ಕುರಿತು ಮಾತನಾಡುವರು.

ಮಹಿಳಾ ಮುಖ್ಯಸ್ಥರಾದ ಸುಚಿತ್ರಾ ರೊಯ್ರೊತ್, ಮೇರಿ ವಿನಯ್ ಉತ್ತರ್ಕರ್, ತಿಯರಮ್ ಇಂಕ್, ನಿಶಾ, ಮೈಪಾಲ್, ಡಾ. ಜುಯಿನ್ ಚೌಧುರಿ ಭಾಗವಹಿಸುವರು. ಡಿ. 5ರಂದು ಮಾನವ ಸಂಪನ್ಮೂಲ ಮೆಟ್ರಿಕ್ಸ್ ಮತ್ತು ವಿಶ್ಲೇಷಣೆ ವಿಷಯ ಕುರಿತು ಸಮ್ಮೇಳನಾಪೂರ್ವ ಕಾರ್ಯಾಗಾರವು ಎಸ್ ಡಿಎಂಐಎಂಡಿ ಸಂಸ್ಥಯೆ ಆವರಣದಲ್ಲಿ ನಡೆಯಲಿದೆ. ಕಾರ್ಯಾಗಾರದ ವಿಷಯ ಕುರಿತು ವಿಶೇಷ ಅವಧಿಗಳ ಜೊತೆಗೆ. ತಜ್ಞರಾದ ಒಂದು ಪ್ಯಾನಲ್ ಸಂವಾದ ಕೂಡ ನಡೆಯಲಿದೆ. ಕಾರ್ಯಾಗಾರದ ವಿಷಯ ಕುರಿತು ವಿಶೇಷ ಅವಧಿಗಳ ಜೊತೆಗೆ ತಜ್ಞರುಗಳನ್ನೊಳಗೊಂಡ ಒಂದು ಪ್ಯಾನೆಲ್ ಸಂವಾದ ಕೂಡ ಈ ಕಾರ್ಯಾಗಾರ ದಲ್ಲಿ ಇರುತ್ತದೆ. ಕಾರ್ಯಾಗಾರದಲ್ಲಿ ಮತ್ತು ಸಮ್ಮೇಳನದಲ್ಲಿ ಭಾಗವಹಿಸಲು ಮುಂಚೆಯೇ ನೋಂದಣಿ ಮಾಡಿಕೊಳ್ಳಬೇಕು. ಮಾಹಿತಿಗಾಗಿ ಮೊ. 9742722906 ಸಂಪರ್ಕಿಸಿ.